ವಾರದ ಪತ್ರ

## ಮರಳಿ ಬರಲಿ ಆ ದಿನ

ಮೂರು ದಶಕಗಳ ಹಿಂದೆ ದೂರದರ್ಶನ ಬೆಂಗಳೂರು ಮತ್ತು ರಾಷ್ಟ್ರೀಯ ವಾಹಿನಿಗಳಲ್ಲಿ ಸದಭಿರುಚಿಯ ಧಾರಾವಾಹಿಗಳು ಬರುತ್ತಿದ್ದವು. ಮನೆಮಂದಿಯೆಲ್ಲ ಕುಳಿತು ನೋಡಿ ಆನಂದಿಸುತ್ತಿದ್ದೆವು. ಈಗಿನಂತೆ ಸೇಡು, ಅಕ್ರಮ ಸಂಬಂಧ, ಮನೆ–ಮನ ಒಡೆಯುವುದು ಮೊದಲಾದ ನಕಾರಾತ್ಮಕ ಅಂಶಗಳು ಆಗ ಇರಲೇ ಇಲ್ಲ. ಅಷ್ಟೇ ಅಲ್ಲ, ಪ್ರತಿ ಧಾರಾವಾಹಿಗಳನ್ನೂ ಹದಿಮೂರು ಕಂತುಗಳಿಗೇ ಸೀಮಿತಗೊಳಿಸುತ್ತಿದ್ದರು. ಈಗ ಖಾಸಗಿ ವಾಹಿನಿಗಳಲ್ಲಿರುವಂತೆ ವರ್ಷಗಟ್ಟಲೆ ಒಂದೇ ಕಥೆಯನ್ನು ಎಳೆಯುತ್ತಾ ಬೋರ್ ಹೊಡೆಸುವ ಪರಿಪಾಠ ಇರಲೇ ಇಲ್ಲ. ಮತ್ತೆ ಅಂತಹ ದಿನಗಳು ಎಲ್ಲ ಟೀವಿಗಳಲ್ಲಿ ಮರಳಿ ಬಂದರೆ ಎಷ್ಟು ಚೆನ್ನ!

—ಬಿ.ಎಸ್. ಭರತ್, ಬೆಂಗಳೂರು

## ದಾರಿ ತಪ್ಪಿದ ರಾಮಾಚಾರಿ

ಕಲರ್ಸ್‌ನ 'ರಾಮಾಚಾರಿ'ಯ ಪ್ರತೀ ಸಂಚಿಕೆಯೂ ದಿಕ್ಕು ತಪ್ಪಿ ಸಾಗುತ್ತಿದೆ. ಪ್ರೇಕ್ಷಕರು ಏನನ್ನಾದರೂ ನೋಡ್ತಾರೆ ಅನ್ನೋ ಭ್ರಮೆಯಿಂದ ಹೀಗೆ ಮಾಡುತ್ತಿರಬಹುದು. ಕೆಲ ಸಂಚಿಕೆಗಳು ತೀವ್ರ ಹಾಸ್ಯಾಸ್ಪದ ಆಗಿದ್ದವು. ಚಾರು–ರಾಮಾಚಾರಿಯನ್ನು ಪುಟ್ಟಣ್ಣ ಕಣಗಾಲ್ ನಿರ್ದೇಶಿಸಿದ 'ನಾಗರಹಾವು' ಸಿನಿಮಾದ ಒಂದು ಗೀತೆಗೆ ಕಲ್ಪಿಸಿಕೊಂಡ ದೃಶ್ಯಗಳು ನಿಜಕ್ಕೂ ಬೇಸರ ತಂದವು.

ಚಿತ್ರದುರ್ಗದ ಕೋಟೆಯಲ್ಲಿ ಪ್ಲಾಸ್ಟಿಕ್ ಬಳ್ಳಿಗಳನ್ನು ಹಿಡಿದು ಕೃತಕ ಬಂಡೆಗಳ ನಡುವೆ ಅವರಿಬ್ಬರೂ ನೇತಾಡುವ ದೃಶ್ಯ ಕಳಪೆ. ಯಾವುದೋ ಒಂದು ಹಸಿರು ದೃಶ್ಯದ ಹಿನ್ನೆಲೆಯಲ್ಲಿ, ಯಾವುದೋ ಸಿನಿಮಾದಿಂದ ನಕಲು ಮಾಡಿದ ಹೆಲಿಕಾಪ್ಟರ್ ದೃಶ್ಯವನ್ನು ವಿನಾ ಕಾರಣ ತುರುಕಿ ಇತಿಹಾಸ ಪ್ರಸಿದ್ಧ ಚಿತ್ರದುರ್ಗದಲ್ಲಿ ಕಲ್ಲು, ಬಂಡೆ, ಮರ, ಗಿಡಗಳೇ ಇಲ್ಲ ಎಂಬಂತೆ ತೋರಿಸಿದ್ದು ತೀವ್ರ ಮುಜುಗರ ತಂದಿತು.

—ಆರ್. ವೀರೇಶ್ ಕುಮಾರ್, ಬೆಂಗಳೂರು

## ಎಳೆತಕ್ಕೆ ಮಿತಿ ಇರಲಿ

ಎಳೆತದಲ್ಲಿಯೇ ದಾಖಲೆ ನಿರ್ಮಿಸಿದ ಕಲರ್ಸ್ ಕನ್ನಡದ 'ಮಂಗಳ ಗೌರಿ'ಯನ್ನು 'ಕನ್ನಡತಿ' ಹಿಂದೆ ಹಾಕುವಂತಿದೆ. ತನ್ನ ವಿಶಿಷ್ಟ ಕಥೆ, ನವಿರಾದ ಸಂಭಾಷಣೆ, ಆಡಂಬರವಿಲ್ಲದೆ ಹದವಾದ ಅಭಿನಯ ಮತ್ತು ಕನ್ನಡಾಭಿಮಾನವನ್ನು ಚಿಗುರಿಸುವ ಕಥೆ, ವೀಕ್ಷಕರನ್ನು ಕಾತುರದಿಂದ ಕಾಯುವಂತೆ ಮಾಡಿತ್ತು. ಆದರೆ, ಇತ್ತೀಚೆಗೆ ಧಾರಾವಾಹಿಗಳ ಸಿದ್ಧ ಸೂತ್ರಗಳಿಂದ ಹೊರಬರಲಾರದ ಅಸಹಾಯಕತೆಯಿಂದಲೋ ಏನೋ ಕಥೆಗೆ ಪೂರಕವಲ್ಲದ ತಿರುವುಗಳನ್ನು ನೀಡಿ, ವಿನಾಕಾರಣ ಎಳೆಯುತ್ತಿದ್ದಾರೆ.

ಧಾರಾವಾಹಿಗಳಲ್ಲಿ ಎಳೆತ ತೀರಾ ಸಾಮಾನ್ಯ. ಆದರೆ ಅದು ಒಂದು ಮಿತಿಯಲ್ಲಿದ್ದರೆ, ವೀಕ್ಷಕರು ಆನಂದಿಸುತ್ತಾರೆ. ಸಾನಿಯಾಳ ಬಾಡಿಗಾರ್ಡ್ ಆಗಿ ಹರ್ಷ ಪೊಲೀಸ್ ದಿರಿಸಿನಲ್ಲಿ ಬರುವುದು, ಸಾನಿಯಾ ಗುರುತಿಸದಿರುವುದು ಅಪ್ರಬುದ್ಧ. 'ಕನ್ನಡತಿ'ಯಲ್ಲಿ ಇಂತಹ ದೃಶ್ಯಾವಳಿ ಮತ್ತು ತಿರುವು ವೀಕ್ಷಕರಿಗೆ ಬೇಸರ ಉಂಟು ಮಾಡಿದೆ.

—ರಮಾನಂದ ಶರ್ಮಾ, ಬೆಂಗಳೂರು

## ಈ ಸಾವು ದುರಂತ

ಸ್ಟಾರ್ ಸುವರ್ಣ ವಾಹಿನಿಯ 'ಅರ್ಧಾಂಗಿ'ಯಲ್ಲಿ ರವಿ ಪ್ರಸಾದ್ ಮಂಡ್ಯ, ಅಚ್ಯುತನ ಪಾತ್ರವನ್ನು ನಿರ್ವಹಿಸುತ್ತಿದ್ದರು. ಇತ್ತೀಚೆಗೆ ಒಂದು ಕಂತಿನಲ್ಲಿ ಅಚ್ಯುತ ನಡೆಸುತ್ತಿದ್ದ ಕಂಪನಿಯಲ್ಲಿ ದೊಡ್ಡ ಗುತ್ತಿಗೆಯೊಂದು ಕೈ ತಪ್ಪುವ ಸನ್ನಿವೇಶ ಬರುತ್ತದೆ. ಅದರ ಆಘಾತಕ್ಕೆ ಅವರಿಗೆ ಹೃದಯಾಘಾತ ಆಗುವ ದೃಶ್ಯ ಬಂತು. ನಂತರ ಮುಂದಿನ ಸಂಚಿಕೆಯಲ್ಲಿ ಅಚ್ಯುತ ಪಾತ್ರಧಾರಿ ಬದಲಾಗಿದ್ದರು.

ಪಾತ್ರಧಾರಿಗಳ ಬದಲಾವಣೆ ಸಹಜ. ಇದೂ ಹಾಗೆಯೇ ಎಂದುಕೊಂಡಿದ್ದೆವು. ಆದರೆ ಅವರು ಅನಾರೋಗ್ಯದಿಂದ ನಿಧನರಾಗಿದ್ದಾರೆ ಎಂಬ ಸುದ್ದಿ ತಿಳಿದು ನಂಬಲು ಸಾಧ್ಯವಾಗಲೇ ಇಲ್ಲ. ಧಾರಾವಾಹಿಯಲ್ಲಿ ಅವರಿಗೆ ಹೃದಯಾಘಾತದ ದೃಶ್ಯ ನೋಡಿದ್ದ ನಮಗೆ ಇದೇನು ಕಾಕತಾಳೀಯವೋ ಏನೋ ಅನ್ನಿಸಿ ಮನಸ್ಸು ಖಿನ್ನವಾಯಿತು. ಒಬ್ಬ ಒಳ್ಳೆಯ ಪ್ರತಿಭಾವಂತ ನಟರನ್ನು ಕಳೆದುಕೊಂಡದ್ದು ಮನಸ್ಸಿಗೆ ಬೇಸರ ತಂದಿತು.

—ಕೆ.ಎಸ್. ಸವಿತ, ಬೆಂಗಳೂರು

## ಭೀಭತ್ಸ ಸರಪಳಿಗಳು

ಕಲರ್ಸ್ ಕನ್ನಡ ಚಾನೆಲ್‌ನಲ್ಲಿ 'ಕನ್ಯಾಕುಮಾರಿ', 'ಕೆಂಡಸಂಪಿಗೆ', 'ಮಂಗಳಗೌರಿ', 'ಗೀತಾ', 'ಗಿಣಿರಾಮ' – ಹೀಗೆ ಮನರಂಜನೆಯ ಹೆಸರಿನಲ್ಲಿ ಅಪರಾಧಗಳ ಬಹುಮುಖ ಪ್ರತಿಭೆಯನ್ನು ಪರಿಚಯಿಸುತ್ತಿದ್ದಾರೆ. ಈ ಕಥನಗಳು ಪ್ರೇಕ್ಷಕರ ಮೇಲಿರಲಿ, ಸದಾ ಇಂತಹ ವಿಷಯಗಳನ್ನು ಕಥೆಯಾಗಿಸುವುದರಲ್ಲೇ ಮುಳುಗಿರುವ ತಾಂತ್ರಿಕ ವರ್ಗ, ನಟರ ಮೇಲೆ ಯಾವ ರೀತಿ ಮಾನಸಿಕವಾಗಿ ಪರಿಣಾಮ ಬೀರಬಹುದು?

—ಕೆ.ಎಸ್. ಸೋಮೇಶ್ವರ, ಬೆಂಗಳೂರು

## ಸಮಾಜದ ಪ್ರತಿನಿಧಿ!

ಯೂಟ್ಯೂಬ್ ಭೂಮಿಕಾ ಟಾಕೀಸ್ ಚಾನಲ್‌ನಲ್ಲಿ 'ಮುಕ್ತ ಮುಕ್ತ' ಮರುಪ್ರಸಾರವಾಗುತ್ತಿದೆ. ಟಿ.ಎನ್. ಸೀತಾರಾಮ್ ಅವರ ಧಾರಾವಾಹಿಯಲ್ಲಿ ಬರುವ ಪಾತ್ರಗಳು ನೈಜ ಸಮಾಜವನ್ನು ಪ್ರತಿನಿಧಿಸುತ್ತವೆ.

ರಾಜಾನಂದ ಸ್ವಾಮಿಯ ರಾಜಕೀಯ ಚಕ್ರವ್ಯೂಹಗಳು, ಹರ್ಷವರ್ಧನ್–ಬಿಂಗ ಅವರ ಬಂಡವಾಳಶಾಹಿ ಪ್ರಭುತ್ವ, ರಂಜನ್ ಲಾಲ್ ಮಿಶ್ರಾರ ಭೂಗತ ಚಟುವಟಿಕೆ, ಸಿಎಸ್‌ಪಿ ಕಾನೂನು ಸಲಹೆ ಗಮನ ಸೆಳೆಯುತ್ತಿವೆ.

—ಶಶಾಂಕ್ ಎಸ್. ಉದ್ದಾದೇವರ ಮಠ

## ಕಥಾ ಮಹಿಮೆ

ಝೀ ಕನ್ನಡದ 'ಹಿಟ್ಲರ್ ಕಲ್ಯಾಣ'ದ ನಾಯಕ ಎಜೆ ತನ್ನ ಅಮ್ಮನನ್ನು ತೀರ್ಥಯಾತ್ರೆಗೆ ಕಳಿಸಿ ಸುಮಾರು ದಿನಗಳೇ ಆಯಿತು. ತನ್ನ ಮೊದಲ ಹೆಂಡತಿಯ ಫೋಟೊ ಮುಂದೆ ತನ್ನ ಭಾವನೆಯನ್ನು ಬಿಚ್ಚಿಡುತ್ತಿದ್ದ ಎಜೆ ಈಗ ಅವರನ್ನು ಸಂಪೂರ್ಣ ಮರತೇಬಿಟ್ಟಿದ್ದಾರೆ. ಆಘಾತಕ್ಕೆ ಒಳಗಾಗಿ ತನ್ನ ಮಾತಿನ ಶಕ್ತಿಯನ್ನು ಕಳೆದುಕೊಂಡು ಚಿಕಿತ್ಸೆ ಪಡೆಯುತ್ತಿರುವ ದೇವ್ ಹೆಂಡತಿ ಈಗ ಎಲ್ಲಿದ್ದಾರೋ?

—ಟಿ.ಎಸ್. ಪ್ರತಿಭಾ, ಚಿತ್ರದುರ್ಗ

## ತಪ್ಪು ಮಾಹಿತಿ ಬೇಡ

ಕನ್ನಡ ವಾಹಿನಿಗಳಲ್ಲಿ ಆಗಾಗ ಅವರು ಕೇಳುವ ಪ್ರಶ್ನೆಗಳಿಗೆ ಉತ್ತರಿಸಿ ಬಹುಮಾನ ಗೆಲ್ಲಿ ಎಂಬ ಪ್ರಕಟಣೆಯನ್ನು ನೀಡುತ್ತಾರೆ. ಇತ್ತೀಚೆಗೆ ವಾಹಿನಿಯೊಂದು ಬಹು ಆಯ್ಕೆಯ 5 ಪ್ರಶ್ನೆಗಳಲ್ಲಿ ಪ್ರತಿ ಪ್ರಶ್ನೆಗೆ ಸರಿ ಉತ್ತರ ನೀಡುವ ಒಬ್ಬರಿಗೆ 1 ಗ್ರಾಂ ಚಿನ್ನದ ನಾಣ್ಯ ನೀಡುವ ಸ್ಪರ್ಧೆ ಇಟ್ಟಿತ್ತು.




ಸೆ.27ರ ಒಂದು ಪ್ರಶ್ನೆ; 'ವಿವಾದಿತ ಮಳಲಿ ಮಸೀದಿ ಯಾವ ಜಿಲ್ಲೆಯಲ್ಲಿದೆ?' ಆಯ್ಕೆಗಳು: A.ಮಂಡ್ಯ, B.ಉಡುಪಿ, C.ಮಂಗಳೂರು, D.ಚಿಕ್ಕಮಗಳೂರು. ಉತ್ತರದಲ್ಲಿ ಮಂಗಳೂರು ನೋಡಿ ಇದ್ಯಾವಾಗ ಜಿಲ್ಲೆ ಆಯ್ತು ಎಂದು ನನ್ನ ಮಗ ಕೇಳಿದ. ಮಸೀದಿ ಮಂಗಳೂರಿನಲ್ಲಿ ಇದೆ. ಆದರೆ ಕೇಳಿರುವ ಪ್ರಶ್ನೆ ವೀಕ್ಷಕರಿಗೆ ತಪ್ಪು ಮಾಹಿತಿ ನೀಡಿದಂತಾಗುತ್ತದೆ. ಅಲ್ಲವೇ?

—ರಘುನಾಥ್ ರಾವ್ ತಾಪ್ಸೆ, ದಾವಣಗೆರೆ